02/08/24 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ನಿಮ್ಮ ನಿಜ ಸಂಸ್ಕಾರವು ಪವಿತ್ರತೆಯದಾಗಿದೆ, ನೀವು ರಾವಣನ ಸಂಗದಲ್ಲಿ ಬಂದು ಪತಿತರಾದಿರಿ, ಈಗ ಪುನಃ ಪಾವನರಾಗಿ ಪಾವನಪ್ರಪಂಚಕ್ಕೆ ಮಾಲೀಕರಾಗಬೇಕಾಗಿದೆ"

ಪ್ರಶ್ನೆ: ಅಶಾಂತಿಗೆ ಕಾರಣ ಮತ್ತು ಅದಕ್ಕೆ ನಿವಾರಣೆ ಏನಾಗಿದೆ?

ಉತ್ತರ: ಅಶಾಂತಿಗೆ ಕಾರಣ ಅಪವಿತ್ರತೆಯಾಗಿದೆ, ಈಗ ಭಗವಂತ ತಂದೆಯೊ0ದಿಗೆ ಪ್ರತಿಜ್ಞೆ ಮಾಡಿರಿ- ನಾವು ಪವಿತ್ರರಾಗಿ ಪವಿತ್ರ ಪ್ರಪಂಚವನ್ನು ಸ್ಥಾಪಿಸುತ್ತೇವೆ, ಪವಿತ್ರ ದೃಷ್ಟಿಯನ್ನು ಇಟ್ಟುಕೊಳ್ಳುತ್ತೇವೆ, ಕುದೃಷ್ಟಿಯಾಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿರಿ ಆಗ ಅಶಾಂತಿ ದೂರವಾಗುತ್ತದೆ. ನೀವು ಶಾಂತಿ ಸ್ಥಾಪನೆ ಮಾಡಲು ನಿಮಿತ್ತರಾಗಿರುವ ಮಕ್ಕಳೇ ಎಂದೂ ಅಶಾಂತಿಯನ್ನು ಹರಡಲು ಸಾಧ್ಯವಿಲ್ಲ. ನೀವು ಶಾಂತವಾಗಿರಬೇಕಾಗಿದೆ. ಮಾಯೆಗೆ ಗುಲಾಮರಾಗಬಾರದು.

ಓಂ ಶಾಂತಿ. ತಂದೆಯೇ ಕುಳಿತು ಮಕ್ಕಳಿಗೆ ತಿಳಿಸುತ್ತಾರೆ- ಗೀತೆಯ ಭಗವಂತನು ಗೀತೆಯನ್ನು ತಿಳಿಸಿದರು. ಒಂದುಬಾರಿ ತಿಳಿಸಿ ಮತ್ತೆ ಹೊರಟುಹೋಗುತ್ತಾರೆಂದು ಹೇಳಿದ್ದಾರೆ ಆದರೆ ನೀವು ಮಕ್ಕಳು ಗೀತೆಯ ಭಗವಂತನಿ0ದ ಅದೇ ಗೀತಾ ಜ್ಞಾನವನ್ನು ಕೇಳುತ್ತಿದ್ದೀರಿ ಮತ್ತು ರಾಜಯೋಗವನ್ನೂ ಕಲಿಯುತ್ತಿದ್ದೀರಿ. ಅವರಾದರೆ ಬರೆದಿರುವ ಗೀತೆಯನ್ನು ಓದಿ ಕಂಠಪಾಠ ಮಾಡಿಕೊಂಡು ಮನುಷ್ಯರಿಗೆ ತಿಳಿಸುತ್ತಾ ಇರುತ್ತಾರೆ. ಅವರು ಶರೀರಬಿಟ್ಟ ನಂತರ ಮತ್ತೊಂದು ಜನ್ಮದಲ್ಲಿ ಮಗುವಾಗಿ ಅದನ್ನೇ ತಿಳಿಸಲು ಸಾಧ್ಯವಿಲ್ಲ. ಈಗ ತಂದೆಯು ನಿಮಗೆ ರಾಜ್ಯಭಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳುವವರೆಗೆ ಗೀತೆಯನ್ನು ತಿಳಿಸುತ್ತಾ ಇರುತ್ತಾರೆ. ಲೌಕಿಕ ಶಿಕ್ಷಕರೂ ಸಹ ವಿದ್ಯೆಯನ್ನು ಓದಿಸುತ್ತಲೇ ಇರುತ್ತಾರೆ. ಪಾಠವು ಮುಕ್ತಾಯವಾಗುವವರೆಗೆ ಕಲಿಸುತ್ತಲೇ ಇರುತ್ತಾರೆ. ಪಾಠವು ಪೂರ್ಣವಾದ ಮೇಲೆ ಹದ್ದಿನ ಸಂಪಾದನೆಯಲ್ಲಿ ತೊಡಗುತ್ತಾರೆ. ಶಿಕ್ಷಕರಿಂದ ಓದಿ ಸಂಪಾದನೆ ಮಾಡಿ ವೃದ್ಧರಾದ ಮೇಲೆ ಶರೀರ ಬಿಟ್ಟು ಮತ್ತೊಂದು ಶರೀರವನ್ನು ತೆಗೆದುಕೊಳ್ಳುತ್ತಾರೆ. ಅವರಾದರೆ ಗೀತೆಯನ್ನು ತಿಳಿಸುತ್ತಾರೆ ಆದರೆ ಇದರಿಂದ ಪ್ರಾಪ್ತಿಯಾದರೂ ಏನು, ಇದು ಯಾರಿಗೂ ಗೊತ್ತಿಲ್ಲ. ಗೀತೆಯನ್ನು ತಿಳಿಸಿ ಮತ್ತೆ ಇನ್ನೊಂದು ಜನ್ಮದಲ್ಲಿ ಹೋಗಿ ಮಗುವಾದರೆ ಮತ್ತೆ ತಿಳಿಸಲು ಸಾಧ್ಯವಿಲ್ಲ. ಯಾವಾಗ ದೊಡ್ಡವರಾಗಿ ವೃದ್ಧರಾಗುವರೋ ಗೀತಾಪಾಠಿಯಾಗುವರೋ ಆಗಲೇ ಮತ್ತೆ ತಿಳಿಸುವರು. ಇಲ್ಲಿ ತಂದೆಯಂತೂ ಒಂದೇ ಬಾರಿ ಶಾಂತಿಧಾಮದಿಂದ ಬಂದು ಓದಿಸುತ್ತಾರೆ ಮತ್ತೆ ಹೊರಟುಹೋಗುತ್ತಾರೆ. ತಂದೆಯು ತಿಳಿಸುತ್ತಾರೆ- ನಿಮಗೆ ರಾಜಯೋಗವನ್ನು ಕಲಿಸಿ ನನ್ನ ಮನೆಗೆ ಹೊರಟುಹೋಗುತ್ತೇನೆ. ಯಾರಿಗೆ ಓದಿಸುವೆನೋ ಅವರು ನಂತರ ಬಂದು ತಮ್ಮ ಪ್ರಾಲಬ್ಧವನ್ನು ಪಡೆಯುತ್ತಾರೆ, ತಮ್ಮ ಸಂಪಾದನೆ ಮಾಡಿಕೊಳ್ಳುತ್ತಾರೆ. ನಂಬರ್ವಾರ್ ಪುರುಷಾರ್ಥದ ಅನುಸಾರ ಧಾರಣೆ ಮಾಡಿಕೊಂಡು ಮತ್ತೆ ಹೊರಟುಹೋಗುತ್ತಾರೆ- ಎಲ್ಲಿಗೆ? ಹೊಸ ಪ್ರಪಂಚಕ್ಕೆ. ಈ ವಿದ್ಯೆಯಿರುವುದೇ ಹೊಸ ಪ್ರಪಂಚಕ್ಕಾಗಿ. ಹಳೆಯ ಪ್ರಪಂಚವು ಸಮಾಪ್ತಿಯಾಗಿ ಹೊಸಪ್ರಪಂಚವು ಸ್ಥಾಪನೆ ಆಗುವುದೆಂದು ಮನುಷ್ಯರಿಗೆ ಗೊತ್ತಿಲ್ಲ. ನಿಮಗೆ ಗೊತ್ತಿದೆ- ನಾವು ರಾಜಯೋಗವನ್ನು ಕಲಿಯುವುದು ಹೊಸಪ್ರಪಂಚಕ್ಕಾಗಿ, ನಂತರ ಈ ಹಳೆಯ ಪ್ರಪಂಚವಾಗಲಿ, ಹಳೆಯ ಶರೀರವಾಗಲಿ ಇರುವುದಿಲ್ಲ. ಆತ್ಮವು ಅವಿನಾಶಿಯಾಗಿದೆ, ಆತ್ಮರು ಪವಿತ್ರವಾಗಿ ಪವಿತ್ರ ಪ್ರಪಂಚದಲ್ಲಿ ಬರುತ್ತೀರಿ. ಹೊಸ ಪ್ರಪಂಚವಿತ್ತು, ಅಲ್ಲಿ ದೇವಿ-ದೇವತೆಗಳ ರಾಜ್ಯವಿತ್ತು, ಅದಕ್ಕೆ ಸ್ವರ್ಗವೆಂದು ಹೇಳಲಾಗುತ್ತದೆ. ಆ ಹೊಸಜಗತ್ತಿನ ಸ್ಥಾಪಕ ಭಗವಂತನೇ ಆಗಿದ್ದಾರೆ. ಒಂದು ಧರ್ಮದ ಸ್ಥಾಪನೆ ಮಾಡುತ್ತಾರೆ. ಯಾವುದೇ ದೇವತೆಗಳ ಮುಖಾಂತರ ಮಾಡಿಸುವುದಿಲ್ಲ ಏಕೆಂದರೆ ದೇವತೆಗಳಂತೂ ಇಲ್ಲಿಲ್ಲ ಅಂದಮೇಲೆ ಅವಶ್ಯವಾಗಿ ಯಾವುದೋ ಮನುಷ್ಯನ ಮೂಲಕವೋ ಜ್ಞಾನ ಕೊಡುತ್ತಾರೆ, ಅವರೇ ನಂತರ ಹೋಗಿ ದೇವತೆಯಾಗುತ್ತಾರೆ. ಅದೇ ದೇವತೆಗಳು ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಈಗ ಬ್ರಾಹ್ಮಣರಾಗಿದ್ದಾರೆ- ಈ ರಹಸ್ಯವನ್ನು ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಭಗವಂತನು ನಿರಾಕಾರನಾಗಿದ್ದಾರೆ, ಹೊಸ ಪ್ರಪಂಚವನ್ನು ರಚಿಸುತ್ತಾರೆ. ಈಗಂತೂ ರಾವಣರಾಜ್ಯವಾಗಿದೆ. ನೀವು ಕೇಳುತ್ತೀರಿ- ತಾವು ಕಲಿಯುಗೀ ಪತಿತರೋ ಅಥವಾ ಸತ್ಯಯುಗೀ ಪಾವನರೋ? ಎಂದು. ಆದರೆ ಅವರಿಗೆ ಅರ್ಥವಾಗುವುದಿಲ್ಲ. ಈಗ ತಂದೆಯು ಮಕ್ಕಳಿಗೆ ಹೇಳುತ್ತಾರೆ- ನಾನು 5000 ವರ್ಷಗಳ ಮೊದಲೂ ಸಹ ನಿಮಗೆ ತಿಳಿಸಿದ್ದೆನು. ನಾನು ಬರುವುದೇ ನೀವು ಮಕ್ಕಳನ್ನು ಅರ್ಧಕಲ್ಪ ಸುಖಿಯನ್ನಾಗಿ ಮಾಡಲು. ನಂತರ ರಾವಣ ಬಂದು ನಿಮ್ಮನ್ನು ದುಃಖಿಯನ್ನಾಗಿ ಮಾಡುತ್ತಾನೆ, ಇದು ಸುಖ-ದುಃಖದ ಆಟವಾಗಿದೆ. ಕಲ್ಪದ ಆಯಸ್ಸು 5000 ವರ್ಷಗಳಾಗಿದೆ ಅಂದಮೇಲೆ ಅರ್ಧ-ಅರ್ಧಭಾಗ ಮಾಡಬೇಕಲ್ಲವೆ. ರಾವಣರಾಜ್ಯದಲ್ಲಿ ಎಲ್ಲರೂ ದೇಹಾಭಿಮಾನಿ, ವಿಕಾರಿಗಳಾಗಿಬಿಡುತ್ತಾರೆ. ಈ ಮಾತುಗಳನ್ನೂ ಸಹ ನೀವು ಈಗ ತಿಳಿದುಕೊಳ್ಳುತ್ತೀರಿ. ಮೊದಲು ತಿಳಿದುಕೊಂಡಿರಲಿಲ್ಲ. ಕಲ್ಪ-ಕಲ್ಪವು ಯಾರು ತಿಳಿದುಕೊಳ್ಳುವರೋ ಅವರಿಗೆ ಈಗಲೂ ಅರ್ಥವಾಗುವುದು. ಯಾರು ದೇವತೆಗಳಾಗುವವರಲ್ಲವೋ ಅವರು ಬರುವುದೇ ಇಲ್ಲ. ನೀವು ದೇವತಾ ಧರ್ಮದ ಸಸಿಯನ್ನು ಹಾಕುತ್ತೀರಿ. ಯಾವಾಗ ಅದು ಅವರು ಆಸುರೀ ತಮೋಪ್ರಧಾನವಾಗಿಬಿಡುವುದೋ ಆಗ ದೈವೀ ವೃಕ್ಷವೆಂದು ಹೇಳುವುದಿಲ್ಲ. ವೃಕ್ಷವೂ ಸಹ ಹೊಸದಿದ್ದಾಗ ಸತೋಪ್ರಧಾನವಾಗಿತ್ತು. ನಾವು ಅದರ ಎಲೆಗಳು ದೇವಿ-ದೇವತೆಗಳಾಗಿದ್ದೆವು, ನಂತರ ರಜೋ,

ತಮೋದಲ್ಲಿ ಬಂದೆವು, ಹಳೆಯ ಪತಿತ-ಶೂದ್ರರಾಗಿಬಿಟ್ಟೆವು. ಹಳೆಯ ಪ್ರಪಂಚದಲ್ಲಿ ಹಳೆಯ ಮನುಷ್ಯರೇ ಇರುತ್ತಾರೆ, ಹಳಬರನ್ನೇ ಪುನಃ ಹೊಸಬರನ್ನಾಗಿ ಮಾಡಬೇಕಾಗುತ್ತದೆ. ಈಗ ದೇವಿ-ದೇವತಾ ಧರ್ಮವೇ ಪ್ರಾಯಲೋಪವಾಗಿಬಿಟ್ಟಿದೆ. ತಂದೆಯೂ ಹೇಳುತ್ತಾರೆ- ಯಾವಾಗ ಧರ್ಮಗ್ಲಾನಿ ಆಗುವುದೋ ಆಗ ಬರುತ್ತೇನೆ. ನೀವು ಕೇಳಬಹುದು- ಯಾವ ಧರ್ಮದ ಗ್ಲಾನಿಯಾಗುತ್ತದೆ ಎಂದು. ಆದಿಸನಾತನ ದೇವಿ-ದೇವತಾಧರ್ಮದ ಗ್ಲಾನಿಯಾಗುತ್ತದೆ. ಅದನ್ನು ನಾನು ಸ್ಥಾಪನೆ ಮಾಡಿದ್ದೆನು, ಆ ಧರ್ಮವೇ ಪ್ರಾಯಲೋಪವಾಯಿತು. ಅದಕ್ಕೆ ಬದಲು ಅಧರ್ಮವಾಗಿಬಿಟ್ಟಿದೆ. ಯಾವಾಗ ಧರ್ಮದಿಂದ ಅಧರ್ಮದ ವೃದ್ಧಿಯಾಗುತ್ತದೆಯೋ ಆಗ ತಂದೆಯು ಬರುತ್ತಾರೆ. ಧರ್ಮದ ವೃದ್ಧಿ ಎಂದು ಹೇಳುವುದಿಲ್ಲ. ಧರ್ಮವಂತೂ ಪ್ರಾಯಲೋಪವಾಯಿತು, ಬಾಕಿ ಅಧರ್ಮದ ವೃದ್ಧಿಯಾಯಿತು. ವೃದ್ಧಿಯಂತೂ ಎಲ್ಲಾ ಧರ್ಮಗಳದೂ ಆಗುತ್ತದೆ, ಒಬ್ಬ ಕ್ರೈಸ್ಟ್ ನಿಂದ ಎಷ್ಟೊಂದು ಕ್ರಿಶ್ಚಿಯನ್ ಧರ್ಮದ ವೃದ್ಧಿಯಾಗುತ್ತದೆ, ಬಾಕಿ ದೇವಿ-ದೇವತಾ ಧರ್ಮವು ಪ್ರಾಯಲೋಪವಾಯಿತು. ಪತಿತರಾಗುವ ಕಾರಣ ತಮ್ಮದೇ ಗ್ಲಾನಿ ಮಾಡಿಕೊಳ್ಳುತ್ತಾರೆ. ಧರ್ಮದಿಂದ ಅಧರ್ಮವು ಒಂದೇ ಆಗುತ್ತದೆ, ಮತ್ತೆಲ್ಲಾ ಧರ್ಮದವರು ಚೆನ್ನಾಗಿ ನಡೆಯುತ್ತಿದ್ದಾರೆ. ಎಲ್ಲರೂ ತಮ್ಮ-ತಮ್ಮ ಧರ್ಮದಲ್ಲಿ ಸ್ಥಿರವಾಗಿರುತ್ತಾರೆ. ಆದಿಸನಾತನ ದೇವಿ-ದೇವತಾಧರ್ಮ ಯಾವುದು ನಿರ್ವಿಕಾರಿಯಾಗಿತ್ತೋ ಅದು ಮಾತ್ರವೇ ವಿಕಾರಿಯಾಗಿದೆ. ನಾನು ಪಾವನ ಪ್ರಪಂಚದ ಸ್ಥಾಪನೆ ಮಾಡಿದೆನು ನಂತರ ಅವರೇ ಪತಿತ ಶೂದ್ರರಾಗಿಬಿಡುತ್ತೀರಿ ಅರ್ಥಾತ್ ಧರ್ಮದ ಗ್ಲಾನಿಯಾಗುತ್ತದೆ. ಅಪವಿತ್ರರಾದಾಗ ನನ್ನ ಗ್ಲಾನಿ ಮಾಡಿಸುತ್ತೀರಿ. ವಿಕಾರದಲ್ಲಿ ಹೋಗುವ ಕಾರಣ ಪತಿತರಾಗಿ ತಮ್ಮನ್ನು ದೇವತೆಗಳೆಂದು ಕರೆಸಿಕೊಳ್ಳಲು ಆಗುವುದಿಲ್ಲ. ಸ್ವರ್ಗವು ಬದಲಾಗಿ ನರಕವಾಗಿಬಿಟ್ಟಿದೆ ಆದ್ದರಿಂದ ಯಾರೂ ಪಾವನರು (ವಾಹ್! ವಾಹ್!) ಇಲ್ಲ. ನೀವು ಎಷ್ಟೊಂದು ಛೀ ಛೀ, ಪತಿತರಾಗಿಬಿಟ್ಟಿದ್ದೀರಿ. ತಂದೆಯು ಹೇಳುತ್ತಾರೆ- ನಿಮ್ಮನ್ನು ಹೂಗಳನ್ನಾಗಿ ಮಾಡಿದೆನು, ನಂತರ ರಾವಣನು ನಿಮ್ಮನ್ನು ಮುಳ್ಳುಗಳನ್ನಾಗಿ ಮಾಡಿದನು, ಪಾವನರಿಂದ ಪತಿತರಾಗಿಬಿಟ್ಟಿದ್ದೀರಿ. ತಮ್ಮ ಧರ್ಮದ ಸ್ಥಿತಿಯನ್ನೇ ನೋಡಿಕೊಳ್ಳಿರಿ. ಭಗವಂತನೇ, ನಾವೆಷ್ಟು ಪತಿತರಾಗಿದ್ದೇವೆಂದು ನಮ್ಮ ಸ್ಥಿತಿಯನ್ನು ಬಂದು ನೋಡಿ, ನಮ್ಮನ್ನು ಪಾವನ ಮಾಡಿ ಎಂದು ಕರೆಯುತ್ತಾರೆ. ಪತಿತರಿಂದ ಪಾವನರನ್ನಾಗಿ ಮಾಡಲು ತಂದೆಯು ಬರುತ್ತಾರೆ ಅಂದಮೇಲೆ ಪಾವನರಾಗಬೇಕು, ಅನ್ಯರನ್ನು ಮಾಡಬೇಕು. ನೀವು ಮಕ್ಕಳು ತಮ್ಮನ್ನು ನೋಡಿಕೊಳ್ಳುತ್ತಾ ಇರಿ- ನಾವು ಸರ್ವಗುಣ ಸಂಪನ್ನರಾಗಿದ್ದೇವೆಯೇ? ನಮ್ಮ ಚಲನೆಯು ದೇವತೆಗಳಂತೆ ಇದೆಯೇ? ದೇವತೆಗಳ ರಾಜ್ಯದಲ್ಲಿ ಶಾಂತಿಯಿತ್ತು, ಈಗ ಪುನಃ ವಿಶ್ವದಲ್ಲಿ ಶಾಂತಿ ಹೇಗೆ ಸ್ಥಾಪನೆಯಾಗುವುದು ಎಂಬುದನ್ನು ಕಲಿಸಲು ಬಂದಿದ್ದೇನೆ ಅಂದಮೇಲೆ ನೀವೂ ಶಾಂತಿಯಲ್ಲಿ ಇರಬೇಕಾಗಿದೆ. ಶಾಂತರಾಗುವ ಯುಕ್ತಿಯನ್ನು ತಿಳಿಸುತ್ತೇನೆ- ನನ್ನನ್ನು ನೆನಪು ಮಾಡಿದರೆ ನೀವು ಶಾಂತರಾಗಿ ಶಾಂತಿಧಾಮಕ್ಕೆ ಹೊರಟುಹೋಗುತ್ತೀರಿ. ಕೆಲವು ಮಕ್ಕಳು ಶಾಂತವಾಗಿದ್ದು, ಅನ್ಯರಿಗೂ ಶಾಂತಿಯಲ್ಲಿ ಇರುವುದನ್ನು ಕಲಿಸುತ್ತಾರೆ. ಕೆಲವರು ಅಶಾಂತಿ ಮಾಡಿಬಿಡುತ್ತಾರೆ. ತಾನೂ ಅಶಾಂತವಾಗಿದ್ದು ಅನ್ಯರನ್ನೂ ಅಶಾಂತ ಮಾಡಿಬಿಡುತ್ತಾರೆ. ಶಾಂತಿಯ ಅರ್ಥವನ್ನು ತಿಳಿದುಕೊಂಡಿಲ್ಲ. ಶಾಂತಿಯನ್ನು ಕಲಿಯಲು ಇಲ್ಲಿಗೆ ಬರುತ್ತಾರೆ. ಮತ್ತೆ ಇಲ್ಲಿಂದ ಹೋಗುತ್ತಾರೆಂದರೆ ಅಶಾಂತರಾಗಿಬಿಡುತ್ತಾರೆ. ಅಶಾಂತಿಯು ಅಪವಿತ್ರತೆಯಿಂದಲೇ ಆಗುತ್ತದೆ. ಇಲ್ಲಿ ಬಂದು ಪ್ರತಿಜ್ಞೆ ಮಾಡುತ್ತಾರೆ- ಬಾಬಾ, ನಾನು ನಿಮ್ಮವನಾಗಿದ್ದೇನೆ, ತಮ್ಮಿಂದ ವಿಶ್ವದ ರಾಜ್ಯಭಾಗ್ಯವನ್ನು ಪಡೆಯಬೇಕಾಗಿದೆ. ನಾವು ಪವಿತ್ರರಾಗಿ ಮತ್ತೆ ವಿಶ್ವದ ಮಾಲೀಕರು ಅವಶ್ಯವಾಗಿ ಆಗುತ್ತೇವೆಂದು, ಮತ್ತೆ ಮನೆಗೆ ಹೋದಮೇಲೆ ಮಾಯೆಯು ಬಿರುಗಾಳಿಗಳಲ್ಲಿ ತೆಗೆದುಕೊಂಡು ಬರುತ್ತದೆ, ಯುದ್ಧವಾಗುತ್ತದೆ ಅಲ್ಲವೆ. ನಂತರ ಮಾಯೆಗೆ ಗುಲಾಮರಾಗಿ ಪತಿತರಾಗಬಯಸುತ್ತಾರೆ. ನಾವು ಪವಿತ್ರರಾಗಿರುತ್ತೇವೆಂದು ಯಾರು ಪ್ರತಿಜ್ಞೆ ಮಾಡಿ ನಂತರ ಮಾಯೆಯ ಯುದ್ಧಕ್ಕೆ ಸೋತು ಪ್ರತಿಜ್ಞೆ ಮರೆತುಹೋಗುವರು, ಅವರೇ ಅಬಲೆಯರ ಅತ್ಯಾಚಾರ ಮಾಡುತ್ತಾರೆ. ಭಗವಂತನೊಂದಿಗೆ ನಾವು ಪವಿತ್ರರಾಗಿ ಪವಿತ್ರ ಪ್ರಪಂಚದ ಆಸ್ತಿಯನ್ನು ಪಡೆಯುತ್ತೇವೆ. ನಾವು ಕುದೃಷ್ಟಿಯನ್ನು ಇಟ್ಟುಕೊಳ್ಳದೇ ಪವಿತ್ರದೃಷ್ಟಿಯನ್ನು ಇಟ್ಟುಕೊಳ್ಳುತ್ತೇವೆ, ವಿಕಾರದಲ್ಲಿ ಹೋಗುವುದಿಲ್ಲ. ಕೆಟ್ಟದೃಷ್ಟಿಯನ್ನು ಬಿಡುತ್ತೇವೆಂದು ಪ್ರತಿಜ್ಞೆ ಮಾಡಿ ಮತ್ತೆ ಮಾಯಾ ರಾವಣನಿಗೆ ಸೋತು ಹೋಗುತ್ತಾರೆ. ಯಾರು ನಿರ್ವಿಕಾರಿಗಳಾಗಲು ಬಯಸುತ್ತಾರೆಯೋ ಅವರಿಗೇ ಮತ್ತೆ ತೊಂದರೆ ಕೊಡುತ್ತಾರೆ ಆದ್ದರಿಂದ ಅಬಲೆಯರ ಮೇಲೆ ಅತ್ಯಾಚಾರವಾಗುತ್ತದೆ ಎಂದು ಹೇಳಲಾಗುತ್ತದೆ. ಪುರುಷರು ಬಲಶಾಲಿಗಳಾಗಿರುತ್ತಾರೆ, ಸ್ತ್ರೀಯರು ನಿರ್ಬಲರಾಗಿರುತ್ತಾರೆ. ಯುದ್ಧಕ್ಕೂ ಸಹ ಪುರುಷರೇ ಹೋಗುತ್ತಾರೆ ಏಕೆಂದರೆ ಬಲಶಾಲಿಯಾಗಿದ್ದಾರೆ. ಸ್ತ್ರೀಯರು ಕೋಮಲವಾಗಿರುತ್ತಾರೆ, ಅವರ ಕರ್ತವ್ಯವೇ ಬೇರೆ, ಮನೆ ಸಂಭಾಲನೆ ಮಾಡಿ ಮಕ್ಕಳಿಗೆ ಜನ್ಮಕೊಟ್ಟು ಅವರ ಪಾಲನೆ ಮಾಡುತ್ತಾರೆ. ಇದನ್ನೂ ತಂದೆಯು ತಿಳಿಸುತ್ತಾರೆ. ಸತ್ಯಯುಗದಲ್ಲಿ ಇರುವುದೇ ಒಂದು ಮಗು, ಅದರಲ್ಲಿಯೂ ವಿಕಾರದ ಹೆಸರಿರುವುದಿಲ್ಲ. ಇಲ್ಲಂತೂ ಸನ್ಯಾಸಿಗಳೂ ಸಹ ಕೆಲಕೆಲವೊಮ್ಮೆ ಒಂದು ಮಗುವಂತು ಅವಶ್ಯವಾಗಿ ಇರಬೇಕೆಂದು ಹೇಳಿ ಕೆಟ್ಟಶಿಕ್ಷಣವನ್ನು ಕೊಡುತ್ತಾರೆ. ಈಗ ತಂದೆಯು ತಿಳಿಸುತ್ತಾರೆ- ಈ ಸಮಯದ ಮಕ್ಕಳು ಏನು ಪ್ರಯೋಜನಕ್ಕೆ ಬರುತ್ತಾರೆ? ಈಗ ವಿನಾಶವೂ ಸನ್ಮುಖದಲ್ಲಿ ನಿಂತಿದೆ. ಎಲ್ಲರೂ ಸಮಾಪ್ತಿಯಾಗುವರು. ನಾನು ಬಂದಿರುವುದೇ ಹಳೆಯ ಪ್ರಪಂಚದ ವಿನಾಶ ಮಾಡಲು ಅದು ಸನ್ಯಾಸಿಗಳ ಮಾತಾಯಿತು. ಅವರಿಗಂತೂ ವಿನಾಶದ ಮಾತಿನ ಬಗ್ಗೆ ತಿಳಿದೇ ಇಲ್ಲ. ನಿಮಗೆ ಬೇಹದ್ದಿನ ತಂದೆಯು ತಿಳಿಸುವುದೇನೆಂದರೆ ಮಕ್ಕಳೇ ಈಗ ವಿನಾಶವಾಗಲಿದೆ. ನಿಮ್ಮ ಮಕ್ಕಳೂ ಸಹ ವಾರಸುಧಾರರಾಗುವುದಿಲ್ಲ. ನಮ್ಮ ಕುಲದ ಹೆಸರು ಹೇಳುವವರಿರಲಿ ಎಂದು ನೀವು ತಿಳಿಯುತ್ತೀರಿ ಆದರೆ ಪತಿತ ಪ್ರಪಂಚದ ಚಿಹ್ನೆಗಳು ಯಾವುದೂ ಇರುವುದಿಲ್ಲ. ಪಾವನ ಪ್ರಪಂಚದವರಾಗಿದ್ದೆವು ಎಂದು ನೀವು ತಿಳಿಯುತ್ತೀರಿ. ಮನುಷ್ಯರೂ ಸಹ ನೆನಪು ಮಾಡಿಕೊಳ್ಳುತ್ತಾರೆ ಏಕೆಂದರೆ ಪಾವನ ಪ್ರಪಂಚವು ಇದ್ದು ಹೋಗಿದೆ ಅದಕ್ಕೆ ಸ್ವರ್ಗವೆಂದು ಹೇಳಲಾಗುತ್ತಿತ್ತು. ಆದರೆ ಈಗ ತಮೋಪ್ರಧಾನರಾಗಿರುವ ಕಾರಣ ತಿಳಿದುಕೊಳ್ಳುವುದಿಲ್ಲ. ಅವರ ದೃಷ್ಟಿಯೇ ವಿಕಾರಿಯಾಗಿದೆ. ಇದಕ್ಕೆ ಧರ್ಮಗ್ಲಾನಿಯೆಂದು

ಹೇಳಲಾಗುತ್ತದೆ. ಆದಿಸನಾತನ ಧರ್ಮದಲ್ಲಿ ಇಂತಹ ಮಾತುಗಳಿರುವುದೇ ಇಲ್ಲ. ಪತಿತ-ಪಾವನ ಬನ್ನಿ, ನಾವು ಪತಿತ, ದುಃಖಿಯಾಗಿದ್ದೇವೆಂದು ಕರೆಯುತ್ತಾರೆ. ಅದಕ್ಕೆ ತಂದೆಯು ತಿಳಿಸುತ್ತಾರೆ- ನಾನು ನಿಮ್ಮನ್ನು ಪಾವನರನ್ನಾಗಿ ಮಾಡಿದೆನು, ನಂತರ ಮಾಯಾ ರಾವಣನ ಕಾರಣ ನೀವು ಪತಿತರಾಗಿದ್ದೀರಿ. ಈಗ ಮತ್ತೆ ಪಾವನರಾಗಿ. ಪಾವನರಾಗುತ್ತೀರೆಂದರೆ ಮಾಯೆಯ ಯುದ್ಧವು ನಡೆಯುತ್ತದೆ, ತಂದೆಯಿ0ದ ಆಸ್ತಿಯನ್ನು ಪಡೆಯುವ ಪುರುಷಾರ್ಥ ಮಾಡುತ್ತಿದ್ದವರು ನಂತರ ಮುಖ ಕಪ್ಪು ಮಾಡಿಕೊಂಡರೆ ಆಸ್ತಿಯನ್ನು ಹೇಗೆ ಪಡೆಯುವರು! ತಂದೆಯು ಬರುವುದೇ ಸುಂದರರನ್ನಾಗಿ ಮಾಡಲು. ಸುಂದರರಾಗಿದ್ದ ದೇವತೆಗಳೇ ಕಪ್ಪಾಗಿದ್ದಾರೆ. ದೇವತೆಗಳನ್ನೇ ಕಪ್ಪು ಶರೀರದಲ್ಲಿ ತೋರಿಸುತ್ತಾರೆ. ಕ್ರೈಸ್ಟ್, ಬುದ್ಧ ಮುಂತಾದವರನ್ನು ಎಂದಾದರೂ ಕಪ್ಪಾಗಿ ನೋಡಿದ್ದೀರಾ? ದೇವಿ-ದೇವತೆಗಳ ಚಿತ್ರಗಳನ್ನು ಮಾತ್ರ ಕಪ್ಪಾಗಿ ತೋರಿಸುತ್ತಾರೆ. ಯಾರು ಸರ್ವರ ಸದ್ಗತಿದಾತ, ಪರಮಪಿತ ಪರಮಾತ್ಮ, ಸರ್ವರ ತಂದೆಯಾಗಿದ್ದಾರೆಯೋ ಅವರನ್ನೇ ಪರಮಪಿತ ಪರಮಾತ್ಮ ಬಂದು ಮುಕ್ತಗೊಳಿಸು ಎಂದು ಕರೆಯುತ್ತಾರೆ. ಅವರೇನು ಕಪ್ಪಾಗಿದ್ದಾರೆಯೇ? ಅವರು ಸದಾ ಸುಂದರ, ಸದಾ ಪಾವನನಾಗಿದ್ದಾರೆ. ಕೃಷ್ಣನು ಇನ್ನೊಂದು ಶರೀರವನ್ನು ತೆಗೆದುಕೊಂಡರೂ ಸಹ ಪವಿತ್ರನೇ ಅಲ್ಲವೆ. ಮಹಾನ್ ಆತ್ಮರೆಂದು ದೇವತೆಗಳಿಗೇ ಹೇಳಲಾಗುತ್ತದೆ. ಕೃಷ್ಣನು ದೇವತೆಯಾದನು, ಈಗಂತೂ ಕಲಿಯುಗವಿದೆ ಅಂದಮೇಲೆ ಕಲಿಯುಗದಲ್ಲಿ ಮಹಾತ್ಮರು ಎಲ್ಲಿಂದ ಬರುವರು? ಶ್ರೀಕೃಷ್ಣನು ಸತ್ಯಯುಗದ ಮೊದಲ ರಾಜಕುಮಾರನಾಗಿದ್ದಾನೆ, ಕೃಷ್ಣನಲ್ಲಿ ದೈವೀಗುಣಗಳಿತ್ತು, ಈಗಂತೂ ದೇವತೆಗಳು ಯಾರೂ ಇಲ್ಲ. ಸಾಧು-ಸಂತರು, ಪವಿತ್ರರಾಗುತ್ತಾರೆ. ಆದರೂ ಪುನರ್ಜನ್ಮವನ್ನಂತೂ ವಿಕಾರದಿಂದಲೇ ಪಡೆಯುತ್ತಾರೆ. ಮತ್ತೆ ಸನ್ಯಾಸಧಾರಣೆ ಮಾಡಬೇಕಾಗುತ್ತದೆ. ದೇವತೆಗಳು ಸದಾ ಪವಿತ್ರರಾಗಿರುತ್ತಾರೆ, ಇಲ್ಲಿ ರಾವಣರಾಜ್ಯವಿದೆ. ಸ್ತ್ರೀಯರಲ್ಲಿನ 5 ವಿಕಾರಗಳು, ಪುರುಷರಲ್ಲಿನ 5 ವಿಕಾರಗಳನ್ನು ತೋರಿಸಿ ರಾವಣನಿಗೆ 10 ತಲೆಗಳನ್ನು ತೋರಿಸುತ್ತಾರೆ. ಈ ವಿಕಾರಗಳು ಪ್ರತಿಯೊಬ್ಬರಲ್ಲಿಯೂ ಇವೆ ಎಂಬುದನ್ನು ತಿಳಿದುಕೊಳ್ಳುತ್ತಾರೆ, ಆದರೆ ದೇವತೆಗಳಲ್ಲಂತೂ ಇರಲಿಲ್ಲ ತಾನೆ! ಅದು ಸುಖಧಾಮವಾಗಿತ್ತು, ಅಲ್ಲಿಯೂ ರಾವಣನು ಇದ್ದಿದ್ದರೆ ಅದೂ ದುಃಖಧಾಮವಾಗಿಬಿಡುತ್ತಿತ್ತು. ದೇವತೆಗಳು ಮಕ್ಕಳಿಗೆ ಜನ್ಮ ಕೊಡುತ್ತಾರೆ ಅಂದಮೇಲೆ ಅವರು ವಿಕಾರಿಗಳಾದರಲ್ಲವೆ ಎಂದು ಮನುಷ್ಯರು ತಿಳಿದುಕೊಳ್ಳುತ್ತಾರೆ ಆದರೆ ಅವರಿಗೆ ಗೊತ್ತೇ ಇಲ್ಲ- ದೇವತೆಗಳಿಗೆ ಸಂಪೂರ್ಣ ನಿರ್ವಿಕಾರಿಗಳೆಂದೇ ಗಾಯನ ಮಾಡಲಾಗುತ್ತದೆ ಆದ್ದರಿಂದಲೇ ಅವರಿಗೆ ಪೂಜೆ ನಡೆಯುತ್ತದೆ. ಸನ್ಯಾಸಿಗಳದು ಒಂದು ಮಿಷಿನ್ (ಟ್ರಸ್ಟ್) ಆಗಿದೆ. ಕೇವಲ ಪುರುಷರಿಗೆ ಸನ್ಯಾಸ ಮಾಡಿಸಿ ತಮ್ಮ ಸಂಸ್ಥೆಯನ್ನು ವೃದ್ಧಿ ಮಾಡುತ್ತಾರೆ. ತಂದೆಯು ಮತ್ತೆ ಪ್ರವೃತ್ತಿ ಮಾರ್ಗದ ಹೊಸಮೆಷಿನ್ನು ಸ್ಥಾಪಿಸುತ್ತಾರೆ. ಸ್ತ್ರೀ-ಪುರುಷರಿಬ್ಬರನ್ನು ಪವಿತ್ರರನ್ನಾಗಿ ಮಾಡುತ್ತಾರೆ. ನಂತರ ನೀವೇ ಹೋಗಿ ದೇವತೆಗಳಾಗುತ್ತೀರಿ. ನೀವಿಲ್ಲಿ ಸನ್ಯಾಸಿಗಳಾಗಲು ಬಂದಿಲ್ಲ. ವಿಶ್ವದ ಮಾಲೀಕರಾಗಲು ಬಂದಿದ್ದೀರಿ. ಅವರಂತೂ ಗೃಹಸ್ಥದಲ್ಲಿಯೇ ಜನ್ಮ ತೆಗೆದುಕೊಳ್ಳುತ್ತಾರೆ ಮತ್ತೆ ಅಲ್ಲಿಂದ ಹೊರಟುಹೋಗುತ್ತಾರೆ. ನಿಮ್ಮ ಸಂಸ್ಕಾರವೇ ಪವಿತ್ರತೆಯದಾಗಿದೆ, ಈಗ ಅಪವಿತ್ರರಾಗಿದ್ದೀರಿ, ಪುನಃ ಪವಿತ್ರರಾಗಬೇಕಾಗಿದೆ. ತಂದೆಯು ಪವಿತ್ರ ಗೃಹಸ್ಥ ಆಶ್ರಮವನ್ನು ಸ್ಥಾಪಿಸುತ್ತಾರೆ. ಪಾವನ ಪ್ರಪಂಚಕ್ಕೆ ಸತ್ಯಯುಗವೆಂತಲೂ, ಪತಿತಪ್ರಪಂಚಕ್ಕೆ ಕಲಿಯುಗವೆಂತಲೂ ಹೇಳಲಾಗುತ್ತದೆ. ಇಲ್ಲಿ ಎಷ್ಟೊಂದು ಪಾಪಾತ್ಮರಿದ್ದಾರೆ, ಸತ್ಯಯುಗದಲ್ಲಿ ಈ ಮಾತುಗಳಿರುವುದೇ ಇಲ್ಲ. ತಂದೆಯು ತಿಳಿಸುತ್ತಾರೆ- ಯಾವಾಗ ಭಾರತದಲ್ಲಿ ಧರ್ಮಗ್ಲಾನಿಯಾಗುವುದೋ ಅರ್ಥಾತ್ ದೇವಿ-ದೇವತಾ ಧರ್ಮದವರು ಪತಿತರಾಗುವರೋ ಆಗ ತಮ್ಮ ನಿಂದನೆ ಮಾಡಿಸುತ್ತಾರೆ. ಅದಕ್ಕಾಗಿ ತಂದೆಯು ಹೇಳುತ್ತಾರೆ- ನಾನು ನಿಮ್ಮನ್ನು ಪಾವನರನ್ನಾಗಿ ಮಾಡಿದೆನು, ಮತ್ತೆ ಪತಿತರಾದಿರಿ. ಈಗ ಯಾವುದೇ ಕೆಲಸಕ್ಕೆ ಬರುವುದಿಲ್ಲ, ಯಾವಾಗ ಈ ರೀತಿ ಪತಿತರಾಗಿಬಿಡುತ್ತೀರಿ ಆಗ ಪುನಃ ಪಾವನರನ್ನಾಗಿ ಮಾಡಲು ನಾನೇ ಬರಬೇಕಾಗುತ್ತದೆ. ಈ ಸೃಷ್ಟಿಯ ಚಕ್ರವು ಸುತ್ತುತ್ತಿರುತ್ತದೆ. ಸ್ವರ್ಗದಲ್ಲಿ ಹೋಗುವುದಕ್ಕಾಗಿ ದೈವೀಗುಣಗಳೂ ಬೇಕು, ಕ್ರೋಧವಿರಬಾರದು. ಕ್ರೋಧವಿದ್ದರೆ ಅವರನ್ನೂ ಅಸುರರೆಂದೇ ಹೇಳಲಾಗುವುದು. ಬಹಳ ಶಾಂತಚಿತ್ತ ಸ್ಥಿತಿಯು ಬೇಕಾಗಿದೆ. ಕ್ರೋಧ ಮಾಡಿದರೆ ಇವರಲ್ಲಿ ಕ್ರೋಧದ ಭೂತವಿದೆಯೆಂದು ಹೇಳುತ್ತಾರೆ. ಯಾರಲ್ಲಿ ಯಾವುದೇ ಭೂತವಿದ್ದರೂ ಅವರು ದೇವತೆಗಳಾಗಲು ಸಾಧ್ಯವಿಲ್ಲ. ನರನಿಂದ ನಾರಾಯಣನಾಗಲು ಸಾಧ್ಯವಿಲ್ಲ. ದೇವತೆಗಳಂತೂ ನಿರ್ವಿಕಾರಿಗಳಾಗಿದ್ದರು, ಯಥಾರಾಜ-ರಾಣಿ ತಥಾ ಪ್ರಜಾ ಎಲ್ಲರೂ ನಿರ್ವಿಕಾರಿಯಾಗಿದ್ದರು. ಭಗವಂತ ತಂದೆಯೇ ಬಂದು ಸಂಪೂರ್ಣ ನಿರ್ವಿಕಾರಿಗಳನ್ನಾಗಿ ಮಾಡುತ್ತಾರೆ. ಒಳ್ಳೆಯದು.

ಧಾರಣೆಗಾಗಿ ಮುಖ್ಯಸಾರ:

1. ತಂದೆಯಿಂದ ಪವಿತ್ರತೆಯ ಪ್ರತಿಜ್ಞೆ ಮಾಡಿದ್ದೀರೆಂದರೆ ತಮ್ಮನ್ನು ಮಾಯೆಯ ಯುದ್ಧದಿಂದ ರಕ್ಷಣೆ ಮಾಡಿಕೊಳ್ಳುತ್ತಾ ಇರಬೇಕಾಗಿದೆ. ಎಂದೂ ಮಾಯೆಗೆ ಗುಲಾಮರಾಗಬಾರದು. ಈ ಪ್ರತಿಜ್ಞೆಯನ್ನು ಮರೆಯಬಾರದು ಏಕೆಂದರೆ ಈಗ ಪಾವನಪ್ರಪಂಚಕ್ಕೆ ಹೋಗಬೇಕಾಗಿದೆ.

2. ದೇವತೆಗಳಾಗಬೇಕೆಂದರೆ ಸ್ಥಿತಿಯನ್ನು ಬಹಳ-ಬಹಳ ಶಾಂತಚಿತ್ತ ಮಾಡಿಕೊಳ್ಳಬೇಕಾಗಿದೆ. ಯಾವುದೇ ಭೂತ ಪ್ರವೇಶವಾಗಲು ಬಿಡಬಾರದು. ದೈವೀಗುಣಗಳನ್ನು ಧಾರಣೆ ಮಾಡಿಕೊಳ್ಳಬೇಕು.

ವರದಾನ: ಫರಿಶ್ತಾ ಸ್ವರೂಪದ ಸ್ಮೃತಿಯ ಮೂಲಕ ತಂದೆಯ ಛತ್ರಛಾಯೆಯ ಅನುಭವ ಮಾಡುವಂತಹ ವಿಘ್ನಜೀತ ಭವ

ಅಮೃತವೇಳೆಯಲ್ಲಿ ಏಳುತ್ತಿದ್ದಂತೆಯೇ ಸ್ಮೃತಿಯಲ್ಲಿ ತಂದುಕೊಳ್ಳಿರಿ- ನಾನು ಫರಿಶ್ತಾ ಆಗಿದ್ದೇನೆ. ಬ್ರಹ್ಮಾತಂದೆಗೂ

ಸಹ ಇದೇ ದಿಲ್ವಸಂದ್ ಉಡುಗೊರೆಯನ್ನು ಕೊಡಿ, ಆಗ ಬಾಪ್ದಾದಾರವರು ಪ್ರತಿನಿತ್ಯವೂ ಅಮೃತವೇಳೆಯಲ್ಲಿ ತಮ್ಮನ್ನು ತನ್ನ ಬಾಹುಗಳಲ್ಲಿ ಸಮಾವೇಶ ಮಾಡಿಕೊಂಡುಬಿಡುತ್ತಾರೆ, ಅನುಭವ ಮಾಡುತ್ತೀರಿ- ಬಾಬಾರವರ ಬಾಹುಗಳಲ್ಲಿ, ಅತೀಂದ್ರಿಯ ಸುಖದಲ್ಲಿ ತೂಗುತ್ತಿದ್ದಾರೆ. ಯಾರು ಫರಿಶ್ತಾ ಸ್ವರೂಪದ ಸ್ಮೃತಿಯಲ್ಲಿರುತ್ತಾರೆಯೋ ಅವರ ಮುಂದೆ ಯಾವುದೇ ಪರಿಸ್ಥಿತಿ ಅಥವ ವಿಘ್ನವು ಬರುತ್ತದೆಯೆಂದರೆ ಅವರಿಗಾಗಿ ತಂದೆಯು ಛತ್ರಛಾಯೆಯಾಗಿಬಿಡುತ್ತಾರೆ. ಅಂದಮೇಲೆ ತಂದೆಯ ಛತ್ರಛಾಯೆ ಅಥವ ಪ್ರೀತಿಯ ಅನುಭವ ಮಾಡುತ್ತಾ ವಿಘ್ನಜೀತರಾಗಿರಿ.

ಸ್ಲೋಗನ್: ಸುಖ ಸ್ವರೂಪ ಆತ್ಮವು ಸ್ವಸ್ಥಿತಿಯಿಂದ ಪರಿಸ್ಥಿತಿಯ ಮೇಲೆ ಸಹಜ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತದೆ.